ಒ.ಎಸ್. ನಂ.4/2021
ಪಿಡಬ್ಲು-2

ದಿನಾಂಕ 05.04.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟಿ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ

ನನ್ನ ತಂದೆಗೆ ಪಿತ್ರಾರ್ಜಿತ ಆಸ್ತಿ ಎಂದು ಸರ್ವೆ ನಂ.30 ಮತ್ತು 23 ಜಮೀನುಗಳು ಇರುತ್ತದೆ. ಈ ಎರಡು ಆಸ್ತಿಗಳನ್ನು ಹೊರತುಪಡಿಸಿ ಬೇರೆ ಯಾವ ಪಿತ್ರಾರ್ಜಿತ ಆಸ್ತಿಗಳಿಲ್ಲ ಎಂದರೆ ಸಾಕ್ಷಿ ನನ್ನ ತಂದೆ ಸರ್ವೆ ನಂ.20 ವಿಸ್ತೀರ್ಣ 05-ಎಕರೆ 07-ಗುಂಟೆ ಜಮೀನನ್ನು ಖರೀದಿ ಮಾಡಿರುತ್ತಾರೆ ಎಂದು ಹೇಳುತ್ತಾರೆ. ಸದರಿ ಜಮೀನು ಯಾರ ಹೆಸರ ಮೇಲೆ ಆಗಿರುತ್ತದೆ ಎಂದರೆ ಸಾಕ್ಷಿ 1ನೆ ಪ್ರತಿವಾದಿಯ ಹೆಸರಿನಲ್ಲಿ ಖರೀದಿಯಾಗಿರುತ್ತದೆ ಎಂದು ಹೇಳುತ್ತಾರೆ. ನನ್ನ ತಂದೆ ಕೂಡು ಕುಟುಂಬದಿಂದ ಬಂದ ಆದಾಯದಿಂದ ದಾವಾಸ್ತಿ ನಂ.3 ನ್ನು ಖರಿದಿ ಮಾಡಿದ ಬಗ್ಗೆ ಯಾವುದಾದರೂ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. 1ನೆ ಪ್ರತಿವಾದಿಯ ಹೆಸರಿಗೆ ಮಾಡಿದ ಜಮೀನಿನ ಖರಿದಿ ಪತ್ರದಲ್ಲಿ ನನ್ನ ಹಾಗೂ ನನ್ನ ತಂದೆ-ತಾಯಿಯ ಸಹಿ ಇಲ್ಲ ಎಂದರೆ ಸರಿ.

ನನಗೆ 42-ವರ್ಷಗಳಾಗಿರುತ್ತವೆ. 1ನೆ ಪ್ರತಿವಾದಿಯು ದಾವಾ ಸ್ವತ್ತು ನಂ.3 ನ್ನು 1996 ರಲ್ಲಿ ಖರೀದಿ ಮಾಡಿದ್ದು ಆ ಸಮಯದಲ್ಲಿ ನಾನು ಅಪ್ರಾಪ್ತನಿದ್ದೆ ಎಂದರೆ ಸರಿ. ನಾವು ನಮ್ಮ ಜಮೀನು ಮತ್ತು ಮನೆಯನ್ನು ಪಾಲು ಕೇಳಿ ದಾವೆ ಹಾಕಿರುತ್ತೇವೆ. ಶಿವಪೂರದಲ್ಲಿರುವ ಮನೆ ನನ್ನ ತಂದೆಯ ಹೆಸರಿನಲ್ಲಿರುತ್ತದೆ. 1ನೆ ಪ್ರತಿವಾದಿ ಖರೀದಿಸಿದ ದಾವಾ ಸ್ವತ್ತು ನಂ.3 ರಲ್ಲಿ ಕೆನಾಲ ಹೋಗಿದ್ದರಿಂದ ಪರಿಹಾರ ಬಂದಿರುತ್ತದೆ ಅದನ್ನು 1ನೆ ಪ್ರತಿವಾದಿ ಪರಿಹಾರ ಹಣ ಪಡೆದಿರುತ್ತಾರೆ ಎಂದರೆ ಸಾಕ್ಷಿ 1ನೆ ವಾದಿ ಮತ್ತು 1ನೆ ಪ್ರತಿವಾದಿ ಪಡೆದಿರುತ್ತಾರೆ ಎಂದು ಹೇಳುತ್ತಾರೆ. ಸಾಕ್ಷಿ ಮುಂದುವರೆದು ನನಗೂ ಸಹ ಪರಿಹಾರ ಹಣ ನೀಡಿರುತ್ತೇವೆ ಎಂದು ಪಂಚಾಯತಿ ಆಗಿದ್ದು ಆದರೆ ನನಗೆ ಯಾವುದೆ ಪರಿಹಾರ ಹಣ ಕೊಟ್ಟಿರುವುದಿಲ್ಲ ಎಂದು ಹೇಳುತ್ತಾರೆ.

1ನೆ ಪ್ರತಿವಾದಿ ನನ್ನ ಹಾಗೂ ನನ್ನ ಅಣ್ಣ ಹಣಮಂತರಾಯನ ಮೇಲೆ ಅಸಲು ವಾದೆ ನಂ.22/2019 ರಲ್ಲಿ ನಿರ್ಬಂದಕಾಜ್ಞೆ ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿ. 1ನೆ ಪ್ರತಿವಾದಿ ದಾವೆ ಸಲ್ಲಿಸಿದ ಕಾರಣ ನಾನೂ ಸಹ ಈ ದಾವೆ ಹಾಕಿರುತ್ತೇನೆ ಎಂದರೆ ಸರಿಯಲ್ಲ. ಸರ್ವೆ ನಂ.20 ವಿಸ್ತೀರ್ಣ 05-ಎಕರೆ 07-ಗುಂಟೆ ಜಮೀನನ್ನು 1ನೆ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಯಿದ್ದು ನನಗೆ ಯಾವುದೆ ಪಾಲು ಬರುವುದಿಲ್ಲ ಎಂದರೆ ಸರಿಯಲ್ಲ.

ನನ್ನ ಅಣ್ಣ ಹಣಮಂತರಾಯ 20-25 ವರ್ಷಗಳಿಂದ ವಾಡಿ ಗ್ರಾಮದಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿ. 1ನೆ ಪ್ರತಿವಾದಿ ವಿಜಯಪೂರದಲ್ಲಿ 30-ವರ್ಷಗಳಿಂದ ವಾಸವಾಗಿದ್ದಾರೆ ಎಂದರೆ ಸಾಕ್ಷಿ ಜಮೀನು ಖರೀದಿ ಮೊದಲು ಇಲ್ಲೆ ಇದ್ದರು ನಂತರ ವಿಜಯಪೂರಕ್ಕೆ ಹೋಗಿರುತ್ತಾರೆ. 30-ವರ್ಷಗಳಿಂದ ನಾನು ಮತ್ತು 1ನೆ ಪ್ರತಿವಾದಿಯ ಬೇರೆ ಬೇರೆ ಸ್ಥಳಗಳಲ್ಲಿ ವಾಸವಾಗಿರುತ್ತೇವೆ ಎಂದರೆ ಸರಿ. ದಾವಾ ಸ್ವತ್ತು ನಂ.3 ರಲ್ಲಿ ನನಗೆ ಯಾವುದೆ ಪಾಲು ಬರದಿದ್ದರೂ ಸಹ 1ನೆ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ ಇದೆ

ಸಿವಿಲ್ ನ್ಯಾಯಾಧೀಶರು
ಜೇವರ್ಗಿ